**ಓ.ಎಸ್. ನಂ. 360/2014 ಪಿ.ಡಬ್ಲೂ-1 ಹೆಸರು - ಮಂಟೇದಪ್ಪ**

**ಸಾಕ್ಷಿಯನ್ನು ದಿನಾಂಕಃ 09/11/2022 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಕೆ.ಎಸ್.ಎಂ. ಪ್ರತಿವಾದಿಯರ ಪರ ವಕೀಲರಿಂದಃ-**

ನನ್ನ ತಂದೆಗೆ ದಾವಾ ಸ್ವತ್ತು ಅವರ ಅತ್ತೆ ಮಹದೇವಮ್ಮ ರವರಿಂದ ಬಂದಿರುತ್ತದೆ. ಮಹದೇವಮ್ಮ ನನ್ನ ತಂದೆಗೆ ದಾವಾ ಸ್ವತ್ತನ್ನು ವಿಭಾಗದಲ್ಲಿ ನೀಡಿರುತ್ತಾರೆ. ಆ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನ್ನ ವಾದ ಪತ್ರ ಮತ್ತು ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತು ನನ್ನ ತಂದೆಗೆ ಮಹದೇವಮ್ಮ ರವರಿಂದ ಬಂದಿದೆ ಎಂದು ಬರೆಸಿಲ್ಲ ಎಂದರೆ ಸರಿಯಲ್ಲ. ಮಹದೇವಮ್ಮ ರವರ ಹೆಸರಿನಲ್ಲಿ ದಾವಾ ಸ್ವತ್ತು ಇತ್ತು ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ. ಮಹದೇವಮ್ಮ ರವರ ಹೆಸರಿನಲ್ಲಿ ದಾವಾ ಸ್ವತ್ತು ಯಾವಾಗಲೂ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಜಮೀನು ಇರುವ ಗ್ರಾಮ ರಾಮಶೆಟ್ಟಿ ಪುರ ಎಂದು ನಮೂದಿಸಲಾಗಿದೆ ಎಂದರೆ ಸರಿ. ವಾದ ಪತ್ರದಲ್ಲಿ ಮೊದಲಿಗೆ ದಾವಾ ಸ್ವತ್ತು ಪಿ. ಮರಹಳ್ಳಿ ಗ್ರಾಮದಲ್ಲಿ ಇತ್ತು ಎಂದು ನಮೂದಿಸಲಾಗಿತ್ತು ಎಂದರೆ ಸರಿ. ದಿನಾಂಕ 15.05.2014 ರಂದು ನನ್ನ ತಂದೆ, ತಾಯಿ, ನಾನು ಮತ್ತು ಸಹೋದರ, ಸಹೋದರಿ ಈಗ ನನಗೆ ತೋರಿಸಿದ ಪತ್ರದಂತೆ ವಿಭಾಗ ಪತ್ರ ಮಾಡಿಕೊಂಡೆವು ಎಂದರೆ ಸರಿ. ಸಾಕ್ಷಿಯು ದಾಖಲಾತಿಯನ್ನು ನೋಡಿ ಒಪ್ಪಿದ್ದರಿಂದ್ದಾಗಿ ದಿನಾಂಕ 15.05.2014 ರ ನೊಂದಾಯಿತ ವಿಭಾಗ ಪತ್ರದ ದೃಡೀಕೃತ ನಕಲನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರ ಮೊದಲ ಪುಟದಲ್ಲಿ ಇರುವ ಮೊದಲ ರುಜು ನನ್ನ ತಂದೆಯದ್ದು ಮತ್ತು ಪುಟ್ಟಲಿಂಗಮ್ಮನ ಹೆಬ್ಬಿಟಿನ ಗುರುತಿನ ಕೆಳಗೆ ಇರುವ ರುಜು ನನ್ನದು. ನಿಡಿ-1 ರಲ್ಲಿ ನನ್ನ ತಂದೆ ಮತ್ತು ಸಹೋದರಿ ರಾಣಿ ಆಸ್ತಿಯ ಬದಲಾಗಿ 80,000/- ರೂಗಳನ್ನು ತಮ್ಮ ಹಿಸ್ಸೆಯಾಗಿ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-1 ರಂತೆ ನನ್ನ ತಂದೆಯ ಪಾಲಿಗೆ ದಾವಾ ಆಸ್ತಿ ಬಂದಿಲ್ಲ ಎಂದರೆ ಸರಿಯಲ್ಲ. ನಿಪಿ-3 ರಲ್ಲಿ ಪವತಿ ಬದಲಾವಣೆ ಮೇರೆ ಎಂದು ನಮೂದಿಸಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಖಾತೆಯೂ ಪೌತಿ ಆಧಾರದ ಮೇಲೆ ಆಗಿಲ್ಲ. ಸರ್ವೆ ನಂಬರ್ 22 ಒಟ್ಟು 4 ಎಕರೆ 24 ಗುಂಟೆ 3 ಗುಂಟೆ ಖರಾಬನ್ನು ಒಳಗೊಂಡಂತೆ ಇದೆ. ನಿಪಿ-4 ರಲ್ಲಿ ಸರ್ವೆ ನಂಬರ್ 22 ರ 4 ಎಕರೆ 21 ಗುಂಟೆ ನಾಗಪ್ಪ, ಗಣೇಶಪ್ಪ, ಸಿದ್ದಪ್ಪ ರವರಿಗೆ 11.04.1975 ರಲ್ಲಿ ದಾನ ಆಗಿದೆ ಎಂದು ನಮೂದು ಇದೆ ಎಂದರೆ ಸರಿಯಲ್ಲ. ಸದರಿ ನಾಗಪ್ಪ, ಗಣೇಶಪ್ಪ ಮತ್ತು ಸಿದ್ದಪ್ಪ ಈ ದಾವೆಯ ಪ್ರತಿವಾದಿ 1, 5 ಮತ್ತು 8 ಎಂದರೆ ಸರಿ. 1993 ಕ್ಕಿಂತ ಹಿಂದೆ ನನ್ನ ತಂದೆಯ ಹೆಸರಿನಲ್ಲಿ ದಾವಾ ಸ್ವತ್ತಿನ ಪಹಣಿ ಪತ್ರಿಕೆ ಇದ್ದ ಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ.

( ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.)

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಓ**

ಸಹಿ/-

1 **ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**